**<u>ಅಸಲು ದಾವಾ ಸಂಖ್ಯೆಃ -207/2021</u>** **ಡಿ.ಡಬ್ಲ್ಯೂ:-1**

ದಿನಾಂಕಃ **07.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ವಾದಿ ಗೊತ್ತಿಲ್ಲ. ನಾನು ತಕ್ಕನಹಳ್ಳಿ ಗ್ರಾಮದ ವಾಸಿ ಮತ್ತು ವಾದಿಯು ಸಹ ತಕ್ಕನಹಳ್ಳಿ ಗ್ರಾಮದ ವಾಸಿ. ನಾನು 53 ವರ್ಷಗಳಿಂದಲೂ ತಕ್ಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಹೊನ್ನಾಳಿ ನ್ಯಾಯಾಲಯದಲ್ಲಿ ನನಗೆ ಸೇರಿದ ಒಟ್ಟು 3-4 ಪ್ರಕರಣಗಳು ಚಾಲ್ತಿಯಲ್ಲಿರುತ್ತದೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವ ಬಗ್ಗೆ ತಿಳುವಳಿಕೆ ಜ್ಞಾನ ಇದೆ ಎಂದರೆ ಸರಿ. ನನ್ನ ತಾಯಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಕಣ್ಣು ಕಾಣಿಸುವುದಿಲ್ಲ. ನಿಡಿ-1 ದಾಖಲೆಯಲ್ಲಿ ನನ್ನ ತಾಯಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಕಣ್ಣು ಕಾಣಿಸುವುದಿಲ್ಲ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯು ಮನೆಯಲ್ಲಿ ತನ್ನ ದಿನನಿತ್ಯದ ಎಲ್ಲಾ ಕೆಲಸ ಕಾರ್ಯಗಳನ್ನು ತಾವೇ ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ಪ್ರತಿವಾದಿಯಿಂದ ಮುಖ್ತಾರನಾಮೆಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನಮಗೆ ಸೇರಿದ ಸರ್ವೇ ನಂ.4 ರ ಆಸ್ತಿ ತನಗೆ ಸೇರಿದ್ದು ಎಂದು ದಾವೆಯನ್ನು ಸಲ್ಲಿಸಿದ್ದಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.